

ಹೋಗಬೇಕೆಂದು ನಿರ್ದೇಶಿಸಿದರೋ ಆ ಕಡೆ ಅಪ್ಪನೊಂದಿಗೆ ಹೊರಟೆ.

ಈಗಾಗಲೇ ನಾಲ್ಕೈದು ಜನ ಪೇಶೆಂಟ್‌ಗಳು ಡಾಕ್ಟರ್‌ಗಾಗಿ ಕಾಯುತ್ತಾ ಕುಳಿತಿದ್ದರು. ನಾವು ಅಲ್ಲಿಯೇ ಕುಳಿತು ಹಾಗೇ ಸುತ್ತ ಕಣ್ಣಾಡಿಸಿದೆವು. ನನ್ನ ಪಕ್ಕದಲ್ಲಿ ಕುಳಿತಿದ್ದ ಹುಡುಗಿಗೆ ಅಂದಾಜು ಮೂವತ್ತು ನಲವತ್ತರೊಳಗಿನ ಪ್ರಾಯವಿರಬಹುದು. ನೋಡಲು ಸಣಕಲು ಕಡ್ಡಿಯಂತಿದ್ದಳು. ಕೆಮ್ಮುತ್ತಾ ಕುಳಿತಿದ್ದ ಆ ಹುಡುಗಿ ಕುತ್ತಿಗೆಗೆ ಯಾವುದೋ ಬಟ್ಟೆ ಕಟ್ಟಿಕೊಂಡಿದ್ದಳು. ಆಕೆಯ ಪಕ್ಕದಲ್ಲಿದ್ದ ಸ್ವಲ್ಪ ವಯಸ್ಸಾದಂತೆ ಕಾಣುತ್ತಿದ್ದ ಹೆಂಗಸನ್ನು ನೋಡಿದೆ. 'ಡಾಕ್ಟ್ರು ಇನ್ನು ಬಂದಿಲ್ಲ, ಮತ್ತೆ ಊರಿಗೆ ಬೇರೆ ಹೋಗಬೇಕು' ಎಂದಳು. ಅಪರಿಚಿತಳನ್ನು ಪರಿಚಯ ಮಾಡಿಕೊಳ್ಳುವ ಯಾವ ಉಮೇದು ಇಲ್ಲದೆ ನಾನು ನಿರ್ಲಿಪ್ತತೆಯಿಂದ 'ಹೋ' ಎಂದೆ.

'ನನ್ನ ಮಗಳು ಕಣವ್ವಾ ಇದು. ಮದ್ವೆಯಾಗಿ ಹತ್ತು ವರ್ಷ ಆಗಿದೆ. ಎರಡು ಮಕ್ಕಳು ಬೇರೆ ಅವೆ. ಒಂದು ವರ್ಷದಿಂದ ಗಂಟಲಲ್ಲಿ ಗಂಟು ಕಾಣಿಸ್ತು ಅಂತ ತೋರಿಸಿದ್ರೆ ಅದು ಕ್ಯಾನ್ಸರ್ ಅಂತ ಗೊತ್ತಾಯ್ತು. ಅವಳ ಗಂಡ ಈ ರೋಗ ಅಂತ ಗೊತ್ತಾಗುತ್ಲವೇ ತವರಿಗೆ ತಂದು ಬಿಟ್ಟು ಹೋದ. ಅವನಿಗೆ ಬೇಡದ್ದು ನಮಗೆ ಬೇಡ ಅಂತ ಬಿಸಾಕಾಗತ್ತೈತಾ? ನಾನು ಹೆತ್ತ ಕೂಸಲ್ಲವ್ವಾ, ನಾನೇ ತೋರಿಸ್ತಾ ಇದ್ದೀನಿ. ಆಪರೇಶನ್‌ನ ಈ ಡಾಕ್ಟ್ರು ಮಾಡವ್ರೆ. ಒಂದ್ ಹನಿ ನೀರು ಕುಡಿಯಾಕು ಕಷ್ಟಪಡ್ತಾಳೆ. ನೋಡ್ತಾ ಇದ್ದೀಯಲ್ಲಾ, ಗುಂಡಿಲಿ ಕಿತ್ತ ಹೆಣ ಆಗವಳೆ. ಎಂತ ರೋಗ ಬಂದ್ರು ತಡಿಬೌದು, ಇದ್ ಮಾತ್ರ ಬರಬಾರ್ದು ಕಣಾ' ಅಂತ ಒಂದೇ ಸಮನೆ ತನ್ನೊಳಗಿನ ದುಃಖವನ್ನು ಹೊರಹಾಕಿ ಕಟ್ಟಿದ್ದ ಮೂತ್ರ ಹೊರಹಾಕಿದಾಗ ಆಗುವ ನಿರಮ್ಮಳತೆಯಲ್ಲಿ ಕುಳಿತಳು.

ಮೊದಲು ಬಂದ ಪೇಶೆಂಟ್‌ಗಳನ್ನು ನೋಡಿದ ಡಾಕ್ಟರ್ ಅಪ್ಪನನ್ನು ಕರೆದರು. ಅಪ್ಪ, ನಾನು ಅದೇ ದೃಢತೆಯಿಂದ ಅವರ ರೂಮು ಪ್ರವೇಶಿಸಿದೆವು. ಅಪ್ಪನನ್ನು ಮುಂದೆ ಕೂಡಿಸಿಕೊಂಡ ಡಾಕ್ಟರ್ ಮುಂದೆ ಹತ್ತಾರು ಟೆಸ್ಟ್‌ಗಳನ್ನು ಮಾಡಿಸಿದ್ದ ಫೈಲನ್ನು ಹಿಡಿದೆ. ಅದೆಲ್ಲವನ್ನು ನೋಡಲು ನಿರಾಕರಿಸಿ ಅಪ್ಪನನ್ನು ತಮ್ಮ ಮುಂದೆ ಕುಳ್ಳಿರಿಸಿಕೊಂಡು ಸುಮಾರು ಅರ್ಧ ಗಂಟೆ ಕುತ್ತಿಗೆಯ ಸುತ್ತ, ಗಂಟಲಲ್ಲೆಲ್ಲಾ ಪರೀಕ್ಷಿಸಿದರು. ಇದುವರೆಗೂ ಯಾವ ಡಾಕ್ಟರೂ ಅಪ್ಪನನ್ನು ಹೀಗೆ ಕೂಲಂಕುಶವಾಗಿ ದೈಹಿಕವಾಗಿ ಪರಿಶೀಲಿಸಿದ್ದೇ ಇಲ್ಲ. ಆ ಟೆಸ್ಟ್ ಮಾಡಿಸಿ, ಈ ಟೆಸ್ಟ್ ಮಾಡಿಸಿ ಅಂತ ಟೆಸ್ಟ್‌ಗಳನ್ನು ಮಾಡಿಸಿ ಅದನ್ನು ನೋಡಿದರೆ ವಿನಹ ಹೀಗೆ ನೋಡಿದ್ದೇ ಇಲ್ಲ. ನಮ್ಮೆಲ್ಲರ ನಿರೀಕ್ಷೆಯಂತೆ ಡಾಕ್ಟರು ಕ್ಯಾನ್ಸರ್ ಅಲ್ಲ ಅನ್ನಲಿ ಎಂದು ನನ್ನ ನೆನಪಿಗೆ ಬಂದ ಎಲ್ಲಾ ಗಂಡು, ಹೆಣ್ಣು ದೇವರಿಗೆಲ್ಲಾ ಹರಸಿಕೊಂಡೆ.

'ಹೀಗಾಗಿ ಎಷ್ಟು ವರ್ಷ ಆಯ್ತು' ಡಾಕ್ಟರ್ ನಿಧಾನಕ್ಕೆ ಪ್ರಶ್ನೆ ಕೇಳಿದರು. ನಾನು 'ಈಗ ಮೂರು ತಿಂಗಳಿನಿಂದ. ಎಲ್ಲಾ ಕಡೆ ತೋರಿಸಿದ್ವಿ' ಅಂತ ಎಲ್ಲೆಲ್ಲಿ ತೋರಿಸಿದೆ, ಯಾವ ಯಾವ ಪರೀಕ್ಷೆಗಳಾಗಿವೆ ಅಂತ ಮೆಡಿಕಲ್ ರಿಪೋರ್ಟ್ ಅನ್ನು ಅವರ ಮುಂದಿಟ್ಟೆ. ಅವರು ಅವೆಲ್ಲವನ್ನೂ ಒಂದೊಂದೆ ನೋಡಿ 'ಇದು ಈಗ ಮೂರು ತಿಂಗಳಿನಿಂದ ಬಂದಿರುವ ಕಾಯಿಲೆ ಅಲ್ಲ. ಎರಡು ವರ್ಷದಿಂದಲೇ ನಿಧಾನವಾಗಿ ಒಳಗೆ ಬೆಳೆದಿದೆ. ಧ್ವನಿಪೆಟ್ಟಿಗೆಗೆ ಒತ್ತಡ ಬೀಳುತ್ತಿರುವುದರಿಂದ ಈಗ ಧ್ವನಿ ಕಮ್ಮಿಯಾಗಿದೆ, ಮುಂದೆ ಅದು ಹಬ್ಬಿ ಫುಡ್ ಪೈಪ್‌ನ್ನು ಆವರಿಸಿದರೆ ಆಪರೇಶನ್ ಮಾಡಲು ಖಂಡಿತಾ ಸಾಧ್ಯವಿಲ್ಲ. ದಿಸ್ ಈಸ್ ಫೋರ್ತ್ ಸ್ಟೇಜ್ ಆಫ್ ಕ್ಯಾನ್ಸರ್' ಎಂದರು. ಅಪ್ಪ, ಹಾಗೂ ನನ್ನ ಮುಖ ಡಾಕ್ಟರ್‌ರ ದೃಢವಾದ ಮಾತಿನಿಂದ ಬಿಳಿಚಿಕೊಂಡಿತು. ಇದುವರೆಗೂ ಅಲ್ಲ ಎಂದು ನಂಬಿದ್ದ ನಮ್ಮ ನಂಬಿಕೆಯ ಬೇರುಗಳೇ ಬುಡಮೇಲಾಗತೊಡಗಿದವು. 'ನೋಡಿ ಈಗ ತಕ್ಷಣ ಆಪರೇಶನ್ ಮಾಡಬೇಕು. ಧ್ವನಿಪೆಟ್ಟಿಗೆಯನ್ನು ಸಂಪೂರ್ಣ ತೆಗೆದು ಬಿಡಬೇಕಾಗುತ್ತೆ. ಮುಂದೆ ಮಾತನಾಡಲು ಆಗುವುದಿಲ್ಲ. ಜೀವ ಮುಖ್ಯ ಅನ್ನೋದಾದರೆ ಮಾತು ಹೋಗಲಿ ಬಿಡಿ ಅಂತ ನಾನು ಹೇಳ್ತಾ ಇಲ್ಲ. ಮುಂದೆ ಆರ್ಟಿಫಿಶಿಯಲ್ ಸ್ಟಿಮ್ಯುಲೇಶನ್‌ನಲ್ಲಿ ಮಾತನಾಡಬಹುದು. ಅದೆಲ್ಲಾ ಮುಂದಿನ ಹಂತ. ಈಗಲೇ ಲೇಟ್ ಆಗಿದೆ. ನಿಮ್ಮ ಮಕ್ಕಳು, ಹೆಂಡತಿ ಜೊತೆ ಕುಳಿತು ಮಾತನಾಡಿ. ಈ ವಾರದಲ್ಲಿ ಆಪರೇಶನ್ ಮಾಡೋಣ' ಅಂತ ಡಾಕ್ಟರ್ ಹೇಳಿ ಮುಗಿಸಿದರು. ನಾವಿಬ್ಬರು ಇನ್ನು ಕ್ಯಾನ್ಸರ್ ಎಂಬ ಪದದಿಂದಲೇ ಸುಧಾರಿಸಿಕೊಂಡಿರಲಿಲ್ಲ. ಆಗಲೇ ಆಪರೇಶನ್ನಾ ಅನ್ನಿಸಿತು. ಅಪ್ಪನೇ ಕೆಲ ನಿಮಿಷ ಬಿಟ್ಟು 'ನಾನು ಆಪರೇಶನ್ನಿಗೆ ತಯಾರಿದ್ದೇನೆ' ಅಂದ್ರು. ಹಾಗಂದಾಗ ಅಪ್ಪನ ದನಿ ನಡುಗುತ್ತಿತ್ತಾ?

'ಆಪರೇಶನ್ ಆಯ್ತು. ಪ್ರಪಂಚದ ಕೆಲವೇ ಕೇಸ್‌ಗಳಲ್ಲಿ ಇದೂ ಒಂದು. ಕ್ಯಾನ್ಸರ್ ಧ್ವನಿಪೆಟ್ಟಿಗೆಯನ್ನು ಬಿಟ್ಟು ಬೇರೆಲ್ಲೂ ಹರಡಿರಲಿಲ್ಲ. ಹಾಗಾಗಿ ಇದು ಒಂದು ಗುಡ್ ಸೈನ್. ಈಗ ಐಸಿಯುಗೆ ಶಿಫ್ಟ್ ಮಾಡಿದ್ದಾರೆ. ಅರ್ಧಗಂಟೆ ಬಿಟ್ಟು ಒಬ್ಬೊಬ್ಬರೇ ಹೋಗಿ ನೋಡಿ' ಅಂತ ನನ್ನ ಯಜಮಾನರ ಮಾತಿಗೆ ಮತ್ತೆ ವಾಸ್ತವಕ್ಕೆ ಬಂದೆ. ಅಪ್ಪ ಇಹಲೋಕದ ಅರಿವೆಯೇ ಇಲ್ಲದವನಂತೆ ಮಲಗಿದ್ದ. ಒಂದೆರಡು ದಿನಗಳಲ್ಲಿಯೇ ಅಪ್ಪನನ್ನು ವಾರ್ಡ್‌ಗೆ ಶಿಫ್ಟ್ ಮಾಡಿದರು. ಅಪ್ಪ ವಾರ್ಡ್‌ಗೆ ಬಂದವನೇ ಮುಗುಳ್ನಕ್ಕ. ಏನೋ ಮಾತನಾಡಿದ. ಅರ್ಥವಾಗಲಿಲ್ಲ. ಹಾಗೆಯೇ ಎರಡು ಮೂರು ಬಾರಿ ಏನೋ ಹೇಳಲು ಹೋಗಿ ಕೈಕೊಡವಿದ. ನನ್ನ ಅರಿವಿಗೆ ಬಾರದೆ ಕಣ್ಣಂಚು ಒದ್ದೆಯಾಯಿತು. ಅತ್ತಿಗೆ ಶೈಲ ಟೇಬಲ್ ಮೇಲಿದ್ದ ಪುಸ್ತಕವನ್ನು ಕೈಗಿಟ್ಟಳು. 'ಇನ್ನು ಎಷ್ಟು ದಿನ ಆಸ್ಪತ್ರೆಯಲ್ಲಿ ಇರಬೇಕಂತೆ?, ನಿಮ್ಮಮ್ಮ ಆಸ್ಪತ್ರೆಗೆ ಬರುವುದು ಬೇಡ. ಅವಳಿಗೆ ಬೆನ್ನುನೋವು' ಅಂತ ಬರೆದಿಟ್ಟ. ನಾನು ಓದಿ ಅಪ್ಪನಿಗೆ ಕೈಸನ್ನೆಯಲ್ಲಿ ಉತ್ತರಿಸಲು ಹೋದೆ. ಅಪ್ಪ ನನಗೆ ಕಿವಿ ಕೇಳುತ್ತೆ, ಮಾತಾಡಲು ಆಗಲ್ಲ ಅಷ್ಟೆ ಎಂದು ಕೈಸನ್ನೆ ಮಾಡಿ ಮಗುವಿನಂತೆ ನಗಲಾರಂಭಿಸಿದ. ಯಾಕೋ ಹೊಟ್ಟೆ ತೊಳಸಿದಂತಾಯಿತು.

ಡಿಸ್ಚಾರ್ಜ್ ಆಗಿ ಮನೆಗೆ ಬಂದ ಅಪ್ಪ, ಮತ್ತೆ ಮೊದಲಿನಂತೆ ವಾಕಿಂಗ್‌ಗೆ, ಜೋತಿಷ್ಯ ಅಂತೆಲ್ಲ ಬದುಕು ಕಟ್ಟಲು ಪ್ರಾರಂಭಿಸಿದ. ಮಾತನಾಡ ಲಾಗದಿದ್ದರೇನು ಬರೆಯಲು ಬರುತ್ತಲ್ಲಾ ಅಂತ ಪೆನ್ನು ಪೇಪರ್ ಯಾವಾಗಲೂ ಜೊತೆಯಲ್ಲಿ ಇರಿಸಿಕೊಂಡು ಬರೆದು ತೋರಿಸಲಾರಂಭಿಸಿದ. ಕೆಲವೊಮ್ಮೆ ಅಮ್ಮನಿಗೆ ಬರೆದು ತೋರಿಸಿದರೆ ಅಕ್ಷರ ತಿಳಿಯದೆ ಒದ್ದಾಡುತ್ತಿದ್ದಳು. ಹೊರಗೂ ಒಳಗೂ ಅಪ್ಪ ಮಾತಿಲ್ಲದೆ ಕೆಲಸ ಮಾಡಲಾರಂಭಿಸಿದ. ಧನಾತ್ಮಕ ಚಿಂತನೆಯ ಅಪ್ಪ ಮೊದಲಿನಂತೆಯೇ ಸಾವು ಗೆದ್ದು ಬಂದವನಂತೆ ಜೀವನ ಪ್ರೀತಿಸಲಾರಂಭಿಸಿದ. ಫೋನ್ ಮಾಡಿದಾಗ ಅಪ್ಪ 'ಏನವ್ವಾ ಹೇಗಿದ್ದೀಯಾ? ಮಕ್ಕಳೆಲ್ಲಿ?' ಎಂದೆಲ್ಲಾ ಕೇಳುತ್ತಿದ್ದ. ಈಗ ಆ ಮಾತುಗಳಿಂದ ವಂಚಿತರಾಗಿದ್ದೇವೆ. ಅಪ್ಪನಿಗೆ ಸದಾ ಖುಷಿ ಕೊಡುತ್ತಿದ್ದದ್ದು ಬೆಳಗ್ಗೆ ಕಾಫಿಯ ಜೊತೆಗೆ ಮಾತಾಡುತ್ತಿದ್ದ ವಿಚಾರಗಳು. ಅಣ್ಣ ತಮ್ಮಂದಿರ ಕುಟುಂಬದ ಬಗ್ಗೆ, ನಮ್ಮ ಬಗ್ಗೆ ಅಪ್ಪ ಬಹಳ ಒಳ್ಳೆ ಲಹರಿಯಲ್ಲಿ ವಿಚಾರಿಸುತ್ತಿದ್ದ. ಈಗ ಆ ಸಮಯದಲ್ಲಿ ದೂರದಲ್ಲೆಲ್ಲೋ ಒಬ್ಬನೇ ಕುಳಿತು ಪೇಪರ್‌ನ ಒಂದಕ್ಷರ ಬಿಡದೇ ಓದುತ್ತಲೇ ಇರುತ್ತಾನೆ. ಮನೆಯೂ ಈಗ ಮೌನ ಸೌಧ. ಮಾತಿಲ್ಲದಿದ್ದರೇನು ಅಪ್ಪ ನಮ್ಮೊಂದಿಗಿದ್ದಾನಲ್ಲ ಎಂಬ ಭರವಸೆಯೇ ನಮಗೆ ಭವಿಷ್ಯ..!